**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಶಿಡ್ಲಘಟ್ಟ**

**ಅಸಲು ದಾವಾ ಸಂಖ್ಯೆ:252/2010**

**ಪಿ.ಡಬ್ಲ್ಯು.2**

ದಿನಾಂಕ: 22-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀಸವಾಲು: 3ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ವಿ.ಎಸ್ ರವರಿಂದ**

ಪ್ರತಿವಾದಿಯ ತಂದೆ ನಾರಾಯಣಪ್ಪ ನನಗೆ ಚಿಕ್ಕಪ್ಪ ಆಗಬೇಕು. ಲಕ್ಷ್ಮಯ್ಯ ಕೂಡ ಚಿಕ್ಕಪ್ಪ ಆಗಬೇಕು. ಲಕ್ಷ್ಮಯ್ಯರವರು 25 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ನಾರಾಯಣಪ್ಪ ರವರು ಮೃತಪಟ್ಟು ಸುಮಾರು 15 ವರ್ಷ ಆಗಿದೆ. ನಾನು ಮತ್ತು ನಾರಾಯಣಪ್ಪ ಅಣ್ಣ ತಮ್ಮಂದಿರು. ನಾವು ವಿಭಾಗ ಆಗಿ 3-4 ವರ್ಷ ಆಗಿದೆ.

ನನ್ನ ಚಿಕ್ಕಪ್ಪ ನಾರಾಯಣಪ್ಪರವರಿಗೆ ಇಬ್ಬರು ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ಅವರು ವಾದಿ, 2 ರಿಂದ 5ನೇ ಪ್ರತಿವಾದಿ. ವಾದಿಯನ್ನು ವಾರ ಹುಣಸೇನಹಳ್ಳಿಗೆ, 2ನೇ ಪ್ರತಿವಾದಿಯನ್ನು ತಮ್ಮನಹಳ್ಳಿ ಗ್ರಾಮಕ್ಕೆ, 5ನೇ ಪ್ರತಿವಾದಿಯನ್ನು ವೇಮಗಲ್‌ನ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿದೆ. ನನ್ನ ಚಿಕ್ಕಪ್ಪ ನಾರಾಯಣಪ್ಪರವರು ಕೂತಾಂಡಹಳ್ಳಿ ಗ್ರಾಮದಲ್ಲಿ ಸ್ವತ್ತನ್ನು ಖರೀದಿಸಿರುತ್ತಾರೆ.

3 ಮತ್ತು 4ನೇ ಪ್ರತಿವಾದಿ ಅವರ ತಂದೆ ಬದುಕಿದ್ದಾಗಲೇ ಬೇರೆ ಹೋಗಿರುತ್ತಾರೆ. ಬೇರೆ ಹೋದ ನಂತರ ಖಾತೆ ಅವರ ಹೆಸರಿಗೆ ವರ್ಗಾವಣೆ ಆಗಿಲ್ಲ. ನನ್ನ ಚಿಕ್ಕಪ್ಪ ನಾರಾಯಣಪ್ಪ ದಿನಾಂಕ:26.03.1993 ರಲ್ಲಿ ಮೃತಪಟ್ಟಿದ್ದಾರೆಂದರೆ ಸರಿ. ತೋಟದಲ್ಲಿ ರಸ್ತೆ ಇಲ್ಲ. ಚಿಕ್ಕನಾರಾಯಣಪ್ಪ ರವರ ಪಕ್ಕದಲ್ಲಿರುವ ನಮ್ಮ ಮನೆ ಇದ್ದು ಅವರ ಮನೆಗೂ ನಮ್ಮ ಮನೆಗೂ ರಸ್ತೆ ಇಲ್ಲ. ಚಿಕ್ಕನಾರಾಯಣಪ್ಪರವರು ನಮ್ಮ ನಡುವೆ ರಸ್ತೆಯ ವಿಚಾರವಾಗಿ ವೈಮನಸ್ಸಿದೆ ಎಂದರೆ ಸರಿ ಅಲ್ಲ. ನಾನೇ ವಾದಿಗೆ ಹೇಳಿ ಕೇಸು ಹಾಕಿಸಿರುತ್ತೇನೆಂದರೆ ಸರಿ

ಅಲ್ಲ. ವಾದಿಗೆ ಭಾಗ ಬಂದರೆ ಅದರಲ್ಲಿ ರಸ್ತೆ ಮಾಡಬೇಕೆಂದು ಹಾಕಿಸಿದ್ದೇನೆಂದರೆ ಸರಿ ಅಲ್ಲ.

ನನ್ನ ಚಿಕ್ಕಪ್ಪರವರಿಗೆ ಸುಮಾರು 5-6 ಆಸ್ತಿ ಇದೆ. ವಾದಿಯು ಕೇಸು ಹಾಕಿರುವ ಬಗ್ಗೆ ಗೊತ್ತು ಎಷ್ಟು ಸ್ವತ್ತುಗಳ ಮೇಲೆ ಈ ಕೇಸು ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ವಾದಿಯ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ. ರೋಹಿಣಿ. ಡಿ)
ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ
ಶಿಡ್ಲಘಟ್ಟ.